ಮಾಡಿದಾಗಲೆ ಸಾಗರದಲ್ಲಿ ಉಳಿಯಲು ತೀರ್ಮಾನಿಸಿದ್ದ ರೋಹಿತ್, ಹೋಟೆಲ್ ಸೇರಿದ ನಂತರ ಮನೆಗೆ ಫೋನ್ ಮಾಡ ಬಯಸಿದ್ದ. ಈಗ ನೋಡಿದರೆ ಶಿವಮೊಗ್ಗವೂ ಇಲ್ಲ, ಸಾಗರವೂ ಇಲ್ಲ. ತನ್ನ ಸ್ಥಿತಿಯನ್ನು ಸ್ನೇಹಿತನಿಗೆ, ಹೆಂಡತಿಗೆ ಹೇಳೋಣವೆಂದರೆ ಫೋನೂ ಇಲ್ಲ. ಅಸಲಿಗೆ ತಾನೆಲ್ಲಿದ್ದೇನೆ, ಎತ್ತ ಹೋಗುತ್ತಿದ್ದೇನೆ ಎನ್ನುವುದೇ ಗೊತ್ತಿಲ್ಲದ ಅಲ್ಲೂ ಇಲ್ಲದ ಇಲ್ಲೂ ಇಲ್ಲದ ಸಂಪರ್ಕ ಸಂಪೂರ್ಣ ಕಡಿತಗೊಂಡ ತ್ರಿಶಂಕು ಸ್ಥಿತಿಯಲ್ಲಿ ವಿಲಿವಿಲಿ ಒದ್ದಾಡಿದ. ತನ್ನನ್ನು ಎಳೆದೊಯ್ಯುತ್ತಿರುವುದೇಕೆ... ಎಲ್ಲಿಗೆ ಕರೆದೊಯ್ಯುತ್ತಿದ್ದಾರೆ. ತನ್ನ ಬ್ಯಾಗ್‌ನಲ್ಲಿ ಇವರಿಗೆ ಕಂಡಿದ್ದಾದರೂ ಏನಿರಬಹುದು, ಚಂದ್ರಹಾಸ ಹೇಳಿದಂತೆ ಶಿವಮೊಗ್ಗದಲ್ಲಿ ನಡೆದಿರುವ ಗಲಭೆಗೂ ತನಗೂ ಸಂಬಂಧ ತಳಕು ಹಾಕುವುದು ಈ ಆಸಾಮಿಗಳ ಉದ್ದೇಶವಾಗಿರಬಹುದೆ. ಬಸ್‌ನಲ್ಲಿ ಅಷ್ಟೆಲ್ಲ ಜನರಿದ್ದರಲ್ಲ, ನಾನೇ ಏಕೆ? ಬಗೆ ಹರಿಯಲಿಲ್ಲ. ಹೇಳಿಕೇಳಿ ಅವರದು ಭಯೋತ್ಪಾದಕ ನಿಗ್ರಹ ದಳ. ಯೋಚನೆ ಬಂದಿದ್ದೇ ತಡ ರೋಹಿತ್ ಕೂತಲ್ಲೆ ಬೆವರಿ ನೀರಾದ. ಕಾಲುಕೈ ಮರಗಟ್ಟಿದಂತಾಯಿತು. ಇಂಥ ಸನ್ನಿವೇಶಗಳಿರುವ ಕಥೆ, ಕಾದಂಬರಿ ಓದಿದ್ದು, ಸಿನಿಮಾ ನೋಡಿದ್ದು ನೆನಪಾಗಿ ತನ್ನ ವಿಚಾರದಲ್ಲಿ ಅದು ನಿಜ ಆಗುತ್ತಿರುವುದಕ್ಕೆ ಮರಮರ ಮರುಗಿದ.

ಜೀಪಿನ ಹಿಂಬದಿಯ ಅಡ್ಡಡ್ಡ ಸೀಟಿನಲ್ಲಿ ರೋಹಿತ್‌ನನ್ನು ಕುಳ್ಳಿರಿಸಿದ್ದರು. ಯರ‍್ರಾಬಿರ‍್ರಿ ವೇಗದಲ್ಲಿ ಹೊಂಡಗುಂಡಿ ಹಾರುತ್ತ ನೆಗೆಯುತ್ತ ಸಾಗುತ್ತಿದ್ದ ಮೂಳೆ ಮುರಿಯುವ ಅದರ ಚಲನೆಯ ಹೊಡೆತಕ್ಕೆ ರೋಹಿತ್ನ ಸೊಂಟ ಬೆನ್ನಲ್ಲಿ ನೋವು ಕಾಣಿಸಿಕೊಂಡು ಕ್ರಮೇಣ ಜಾಸ್ತಿಯಾಯಿತು. ತಾಳಗುಪ್ಪ-ಸಾಗರ-ಶಿವಮೊಗ್ಗ ರಸ್ತೆ ಇಷ್ಟೆಲ್ಲ ಕೆಟ್ಟಿಲ್ಲ ಎನ್ನುವುದು ಆಗಾಗ ಆ ಮಾರ್ಗದಲ್ಲಿ ಓಡಾಡುವ ಅವನಿಗೆ ಗೊತ್ತಿತ್ತು. ಅಂದರೆ? ಅಂದರೆ ಯಾವುದೊ ಹಳ್ಳಿ ರಸ್ತೇಲಿ ತನ್ನನ್ನು ಒಯ್ಯುತ್ತಿದ್ದಾರೆ ಎನ್ನುವುದು ಖಾತ್ರಿಯಾಯಿತು. ಎಲ್ಲಿಗೆ ಯಾಕೆ ಎನ್ನುವ ಪ್ರಶ್ನೆ ಮಾತ್ರ ಬಗೆಹರಿಯಲಿಲ್ಲ. ನೋವಿನ ಯಾತನೆಯನ್ನು ಯಾರಲ್ಲಿ ಹೇಳಿಕೊಳ್ಳುವುದು. ಸುಂಕದವರ ಮುಂದೆ ಸುಖ ದುಃಖ ಹೇಳಿಕೊಂಡಂತೆ. ಬೇರೆಲ್ಲ ಮಾರ್ಗಗಳು ಬಂದ್ ಆದ ಸ್ಥಿತಿಯಲ್ಲಿ ಬಂದದ್ದೆಲ್ಲಾ ಬರಲಿ ಎಂಬ ತೀರ್ಮಾನಕ್ಕೆ ಬಂದ. ಎಲ್ಲಿಗೇ ಕರೆದೊಯ್ದು ವಿಚಾರಣೆ ಮಾಡಲಿ ತಾನು ತಪ್ಪಿತಸ್ಥ ಅಲ್ಲ ಎನ್ನುವುದು ಗೊತ್ತಾಗುತ್ತದೆ, ಬಿಡುಗಡೆ ಆಗುತ್ತದೆ. ಒಂದು ದಿವಸ ತಡವಾಗಿಯಾದರೂ ಮನೆ ಮಡದಿಯನ್ನು ಸೇರಿಕೊಳ್ಳುತ್ತೇನೆಂಬ ವಿಶ್ವಾಸದಲ್ಲಿ ನಾಳೆ ಸಿಗಬಹುದಾದ ಸ್ವಾತಂತ್ರ್ಯಕ್ಕೆ ಇವತ್ತೇ ಪುಳಕಗೊಳ್ಳುವ ಯತ್ನ ಮಾಡಿದ. ಹೌದು, ಆ ಬ್ಯಾಗ್ನಲ್ಲಿ ಇದ್ದುದಾದರೂ ಏನೆಂಬ ಯೋಚನೆಯಲ್ಲಿ ಮನಸ್ಸೊಳಗೆ ಹೊಕ್ಕ ಹುಳ ಮತ್ತೆ ಕಿರಿಕಿರಿ ಮಾಡಲಾರಂಭಿಸಿ ಆಗೊಮ್ಮೆ ಈಗೊಮ್ಮೆ ಬರುತ್ತಿದ್ದ ತೂಕಡಿಕೆಯೂ ಮಂಗಮಾಯವಾಯಿತು.

ಕಗ್ಗತ್ತಲೆಯಲ್ಲಿ ಪ್ರಯಾಣದ ದೂರವನ್ನು ಅಂದಾಜು ಮಾಡುವುದು ಕಷ್ಟ. ಕಣ್ಣು ಕಟ್ಟಿದಾಗಲಂತೂ ಇನ್ನೂ ಕಷ್ಟ. ಪ್ರಯಾಣ ಎಷ್ಟು ಹೊತ್ತು ಸಾಗಿತ್ತೋ ಎಷ್ಟು ಸಮಯ ನುಂಗಿತ್ತೋ. ಕೂತಿದ್ದ ವಾಹನದ ವೇಗದ ಲಯಕ್ಕೆ ವಾಲುತ್ತ ಜೋಲುತ್ತಿದ್ದವನಿಗೆ ಜೀಪು ನಿಧಾನಗೊಂಡು ನಿಂತಂತೆನಿಸಿತು. ಪಕ್ಕದಲ್ಲಿದ್ದವರು ರೋಹಿತ್‌ನ ಭುಜ ಹಿಡಿದು ಅಲ್ಲಾಡಿಸಿ 'ರೀಸಸ್ಗೆ ಹೋಗಬೇಕಾ' ಎಂದರು. ಒತ್ತಡವಿತ್ತು. ಹೂಂ ಅಂದ. ಕಣ್ಣಪಟ್ಟಿ ಬಿಚ್ಚಿದವ ಕೈಲಿದ್ದ ಗನ್ ಮೂತಿಯನ್ನು ಮತ್ತೆ ಮತ್ತೆ ರೋಹಿತ್‌ನತ್ತ ಎತ್ತುತ್ತ ಇಳಿಸುತ್ತ 'ಸೀದಾ ಹೋಗಿ ಸೀದಾ ಬಾ' ಎಂದು ಎಚ್ಚರಿಕೆಯ ಧ್ವನಿಯಲ್ಲಿ ಹೇಳಿದ. ಆ ಕತ್ತಲೆಯಲ್ಲಿ ಜೀಪಿನ ಹೆಡ್ ಲೈಟ್ ಪ್ರಖರ ಬೆಳಕನ್ನು ಚೆಲ್ಲಿತ್ತು. ಮೂತ್ರ ವಿಸರ್ಜನೆಯ ಸ್ಥಳಕ್ಕೂ ಬಂದ ಗನ್ ವಾಲಾ ಕೈಲಿದ್ದ ಟಾರ್ಚ್ ಹಿಡಿದು ಅಲ್ಲೇ ನಿಂತ. ಮುಜುಗರವೆನಿಸಿದರೂ ಬೇರೆ ಮಾರ್ಗವಿರಲಿಲ್ಲ. ಆಕಾಶದಲ್ಲಿ ಅಸಂಖ್ಯ ನಕ್ಷತ್ರಗಳು. ಸುತ್ತಮುತ್ತ ಯಾವುದೇ ಮನೆಮಠ ಇಲ್ಲದ ಜಾಗ ಎನ್ನುವುದು ರೋಹಿತ್‌ಗೆ ಖಚಿತವಾಯಿತು. ತನ್ನನ್ನು ಈ ಜನ ಎಲ್ಲಿಗೆ ಒಯ್ಯುತ್ತಿದ್ದಾರೆ. ಪ್ರಶ್ನೆ ಬಗೆಹರಿಯದೆ ಮತ್ತೆ ಅಸ್ವಸ್ಥನಾದ. ಮತ್ತೆ ಕಣ್ಣಿಗೆ ಬಟ್ಟೆ ಬಿಗಿದ ಸ್ಥಿತಿಯಲ್ಲಿ ಅವನನ್ನು ಮೇಲೇರಿಸಿಕೊಂಡ ಜೀಪು ಹಿಂದಿನ ವೇಗಕ್ಕೆ ಮರಳಿ ವಾಲುತ್ತ ತೊನೆಯುತ್ತ ಎತ್ತೆತ್ತಿ ಹಾಕುತ್ತ ಸಾಗಿತು. ಎಷ್ಟು ಹೊತ್ತು ಪ್ರಯಾಣ ಸಾಗಿತ್ತೋ ನಿದ್ರೆಯ ಮಂಪರಿನಲ್ಲಿ ಗೊತ್ತಾಗಲಿಲ್ಲ. ಜೀಪು ನಿಲ್ಲುವ ಸೂಚನೆ ರೋಹಿತ್ಗೆ ಸಿಕ್ಕಿತು. ಮತ್ಯಾಕೆ ಜೀಪು ನಿಲ್ಲುತ್ತಿದೆಯೋ... ರೀಸಸ್ ಮಾಡಿ ಎಷ್ಟು ಹೊತ್ತಾಯಿತು... ಯೋಚಿಸಿದ.

ರೋಹಿತ್‌ನ ಕೈ ಹಿಡಿದು ಇಳಿಸಿದವರು ಕಣ್ಣಪಟ್ಟಿ ಬಿಚ್ಚಿ ಹಾಕಿ ಅಲ್ಲಿದ್ದ ಮನೆಯತ್ತ ನಡೆಯಲು ಸೂಚಿಸಿದರು. ಜೀಪಿನ ಬೆಳಕಿನಲ್ಲಿ ಕೀಲಿಕೊಟ್ಟ ಗೊಂಬೆಯಂತೆ ಹೆಜ್ಜೆ